ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂ:ಸಿ-2/ಆಡಳಿತ/LAQ-1559/2024-25

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು
ದಿನಾಂಕ:19.07.2024

ಇವರಿಗೆ,

ಸರ್ಕಾರದ ಕಾರ್ಯದರ್ಶಿಗಳು,

ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ

ಬೆಂಗಳೂರು- 01

ಮಾನ್ಯರೆ,

ವಿಷಯ: ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಸುರೇಶ್ ಹೆಚ್. ಕೆ. (ಬೇಲೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1559ಕ್ಕೆ ಉತ್ತರವನ್ನು ಸಲ್ಲಿಸುವ ಬಗ್ಗೆ.

*****

ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಸುರೇಶ್ ಹೆಚ್. ಕೆ. (ಬೇಲೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1559 ಕ್ಕೆ ಉತ್ತರವನ್ನು ಸಿದ್ಧಪಡಿಸಿ ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಕೃಷಿ ನಿರ್ದೇಶಕರು

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1559
2. ಸದಸ್ಯರ ಹೆಸರು : ಶ್ರೀ ಸುರೇಶ್ ಹೆಚ್. ಕೆ. (ಬೇಲೂರು)
3. ವಿಷಯ: ಕೃಷಿ ಅಧಿಕಾರಿ, ಸಹಾಯಕ ಕೃಷಿ ಅಧಿಕಾರಿಗಳನ್ನು ನೇಮಿಸುವುದು.
4. ಉತ್ತರಿಸಬೇಕಾದ ದಿನಾಂಕ: 24.07.2024.
5. ಉತ್ತರಿಸಬೇಕಾದವರು : ಮಾನ್ಯ ಮುಖ್ಯ ಮಂತ್ರಿ ರವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೇಲೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಕೃಷಿ ಇಲಾಖೆಯ ರೈತ ಸಂಪರ್ಕಗಳಲ್ಲಿ ಕರ್ತವ್ಯ ನಿರ್ವಹಿಸಲು ಕೃಷಿ ಅಧಿಕಾರಿಗಳು ಮತ್ತು ಸಹಾಯಕ ಕೃಷಿ ಅಧಿಕಾರಿಗಳಿಲ್ಲದೇ ಇಲಾಖೆಯ ಕೆಲಸಗಳಿಗಾಗಿ ದೂರದ ಹಳ್ಳಿಗಳಿಂದ ಬರುವ ಸಾರ್ವಜನಿಕರಿಗೆ / ಕೃಷಿಕರಿಗೆ ತೀವ್ರತರವಾದ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬೇಲೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ವೃಂದದಲ್ಲಿ ಮಂಜೂರು, ಭರ್ತಿ ಮತ್ತು ಖಾಲಿ ಹುದ್ದೆಗಳ ಮಾಹಿತಿ ಕೆಳಕಂಡಂತಿದೆ.
<table>
<tr><th>ಕ್ರ. ಸಂ.</th><th>ವೃಂದ</th><th>ಮಂಜೂರು</th><th>ಭರ್ತಿ</th><th>ಖಾಲಿ</th></tr>
<tr><td>1</td><td>ಕೃಷಿ ಅಧಿಕಾರಿ</td><td>09</td><td>03</td><td>06</td></tr>
<tr><td>2</td><td>ಸಹಾಯಕ ಕೃಷಿ ಅಧಿಕಾರಿ</td><td>12</td><td>00</td><td>12</td></tr>
</table>

ಹೊರಗುತ್ತಿಗೆ/ಗುತ್ತಿಗೆ ಆಧಾರದ ಮೇಲೆ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿಯಲ್ಲಿ ಸಹಾಯಕ ತಾಂತ್ರಿಕರ ಸೇವೆಯನ್ನು ಹಾಗೂ ಆತ್ಮ ಯೋಜನೆಯಡಿಯಲ್ಲಿ ಉಪಯೋಜನಾ ನಿರ್ದೇಶಕರು, ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರು ಮತ್ತು ಸಹಾಯಕ ತಾಂತ್ರಿಕ ವ್ಯವಸ್ಥಾಪಕರ ಸೇವೆಯನ್ನು ಪಡೆಯಲಾಗಿರುತ್ತದೆ. ಪ್ರತಿ ರೈತ ಸಂಪರ್ಕ ಕೇಂದ್ರಕ್ಕೆ ಒಬ್ಬರಂತೆ ದಾಸ್ತಾನು ನಿರ್ವಹಣಾ ಸಿಬ್ಬಂದಿಗಳ ಸೇವೆಯನ್ನು ಹಾಗೂ ಖಾಲಿ ಇರುವ ಹುದ್ದೆಗಳಿಗನುಗುಣವಾಗಿ ಬೆರಳಚ್ಚುಗಾರರು, ವಾಹನ ಚಾಲಕರು, ಗ್ರೂಪ್ ಡಿ ಇವರುಗಳ ಸೇವೆಯನ್ನು ಸಹ ಬಳಸಿಕೊಂಡು ಸಕಾಲದಲ್ಲಿ ಇಲಾಖೆಯ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿರುವುದರಿಂದ ಸಾರ್ವಜನಿಕರಿಗೆ / ಕೃಷಿಕರಿಗೆ ತೊಂದರೆಯಾಗದಂತೆ ಕಾರ್ಯ ನಿರ್ವಹಿಸಲಾಗುತ್ತಿದೆ.</td></tr>
</table>

<table>
<tr>
<td>ಆ</td>
<td>ಬಂದಿದ್ದಲ್ಲಿ, ಕೃಷಿ ಚಟುವಟಿಕೆಗಳಿಗೆ ಪೂರಕವಾಗಿ ಸಾರ್ವಜನಿಕರಿಗೆ / ಕೃಷಿಕರಿಗೆ ಸಮರ್ಪಕವಾಗಿ ಕೆಲಸಗಳು ಆಗುವಂತೆ ಮಾಡುವ ನಿಟ್ಟಿನಲ್ಲಿ ತಾಲ್ಲೂಕಿನ ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳಿಗೆ ಕೃಷಿ ಅಧಿಕಾರಿಗಳು ಮತ್ತು ಸಹಾಯಕ ಕೃಷಿ ಅಧಿಕಾರಿಗಳನ್ನು ನೇಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಪೂರ್ಣ ವಿವರ ನೀಡುವುದು)</td>
<td>ಸರ್ಕಾರದ ಪತ್ರ ಸಂಖ್ಯೆ: AGRI/245/AGS/2024, ದಿನಾಂಕ 06.02.2024ರಲ್ಲಿ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ವೃಂದದಲ್ಲಿ ಕೆಳಕಂಡಂತೆ ನೇರ ನೇಮಕಾತಿ ಕೋಟಾದಡಿ ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡಲು ಅನುಮತಿ ನೀಡಲಾಗಿದ್ದು, ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.
<table>
<tr><th>ವೃಂದಗಳು</th><th>ಹುದ್ದೆಗಳ ಸಂಖ್ಯೆ</th></tr>
<tr><td>ಕೃಷಿ ಅಧಿಕಾರಿ</td><td>100</td></tr>
<tr><td>ಸಹಾಯಕ ಕೃಷಿ ಅಧಿಕಾರಿ</td><td>650</td></tr>
<tr><td>ಒಟ್ಟು</td><td>750</td></tr>
</table>
</td>
</tr>
</table>

ಕೃಷಿ ನಿರ್ದೇಶಕರು